ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1410
ಸದಸ್ಯರ ಹೆಸರು : ಶ್ರೀ ಪ್ರತಾಪ ಸಿಂಹ ನಾಯಕ್ (ವಿಧಾನ ಸಭಾ ಕ್ಷೇತ್ರ)
ಉತ್ತರಿಸುವ ದಿನಾಂಕ : 20.03.2025
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು.

| ಕ್ರ. ಸಂ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಆಲಮಟ್ಟಿ ಮತ್ತು ನಾರಾಯಣಪುರ ಜಲಾಶಯದಿಂದ ಬೇಸಿಗೆಯನ್ನು ಲೆಕ್ಕಿಸದೇ ಹಲವಾರು ಟಿ.ಎಂ.ಸಿ ಅಡಿಗಳಷ್ಟು ನೀರನ್ನು ತೆಲಂಗಾಣಕ್ಕೆ ಹರಿಸಿರುವುದಕ್ಕೆ ರೈತರು ವ್ಯಾಪಕ ವಿರೋಧ ವ್ಯಕ್ತಪಡಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ದಿನಾಂಕ:16.11.2024 ರಂದು ಜರುಗಿದ 2024–25ನೇ ಸಾಲಿನ ಹಿಂಗಾರು ಹಂಗಾಮಿನ ನೀರಾವರಿ ಸಲಹಾ ಸಮಿತಿ ಸಭೆಯ ತೀರ್ಮಾನದಂತೆ ದಿನಾಂಕ:09.12.2024 ರಿಂದ 23.03.2025 ರವರೆಗಿನ ಹಿಂಗಾರು ಬೆಳೆಗಳಿಗೆ ಮುಖ್ಯ ಕಾಲುವೆಗಳಡಿ 14 ದಿನಗಳ ಚಾಲೂ ಹಾಗೂ 10 ದಿನಗಳ ಬಂದ್ ಪದ್ಧತಿಯನ್ನು ಅನುಸರಿಸಿ, ನೀರಾವರಿಗೆ ಲಭ್ಯವಿರುವ 65 ಟಿ.ಎಂ.ಸಿ ನೀರನ್ನು ಹರಿಸಲು ಸೂಚಿಸಲಾಗಿರುತ್ತದೆ.<br><br>ನೀರಾವರಿ ಸಲಹಾ ಸಮಿತಿ ಸಭೆಯ ನಿರ್ಣಯದ ಅನುಸಾರ ಹಿಂಗಾರು ಹಾಗೂ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ ಜೂನ್ 2025ರ ವರೆಗೆ ಆಲಮಟ್ಟಿ ಜಲಾಶಯದಿಂದ 29.04 ಟಿ.ಎಂ.ಸಿ ಹಾಗೂ ನಾರಾಯಣಪುರ ಜಲಾಶಯದಿಂದ 14.50 ಟಿ.ಎಂ.ಸಿ ನೀರನ್ನು ಹೀಗೆ ಒಟ್ಟಾರೆ 43.54 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿರುತ್ತದೆ.<br><br>ಕಳೆದ ಸಾಲಿನಲ್ಲಿ ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ ಮಾತ್ರ ಜೂನ್ 2024 ರ ವರೆಗೆ ಒಟ್ಟು 39.250 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿದ್ದು, ಉದ್ದೇಶಿತ ಬಳಕೆಗೆ ಅಭಾವ ಬರದಂತೆ ಸಮರ್ಪಕವಾಗಿ ನಿರ್ವಹಣೆಯನ್ನು ಮಾಡಲಾಗಿರುತ್ತದೆ.<br><br>ಪ್ರಸಕ್ತ ಸಾಲಿನಲ್ಲಿ, ಬೇಸಿಗೆ ಅವಧಿಯಲ್ಲಿ ಕುಡಿಯುವ ನೀರು ಹಾಗೂ ಇತರೆ ಬಳಕೆಗಾಗಿ ಡಿಸೆಂಬರ್ 2024 ರಿಂದ ಜೂನ್ 2025ರ ವರೆಗೆ ಒಟ್ಟಾರೆ 43.54 ಟಿ.ಎಂ.ಸಿ ನೀರನ್ನು ಕಾಯ್ದಿರಿಸಲಾಗಿದ್ದು, ಇದುವರೆಗೆ 13.089 ಟಿ.ಎಂ.ಸಿ ನೀರನ್ನು ಬಳಸಲಾಗಿದ್ದು, ಬಾಕಿ 30.451 ಟಿ.ಎಂ.ಸಿ ಕಾಯ್ದಿರಿಸಿದ ನೀರಿನಲ್ಲಿ ಉದ್ದೇಶಿತ ಬಳಕೆಗೆ ಅಭಾವ ಬರದಂತೆ ಸಮರ್ಪಕವಾಗಿ ನಿರ್ವಹಣೆಯನ್ನು ಮಾಡಲಾಗುವುದು.<br><br>ಅಂತರ ರಾಜ್ಯಗಳೊಂದಿಗೆ ಉತ್ತಮ ಸಂಬಂಧವನ್ನು ಕಾಯ್ದುಕೊಳ್ಳುವ ಹಿತದೃಷ್ಟಿಯಿಂದ ಹಾಗೂ ಮಾನವೀಯ ದೃಷ್ಟಿಯಿಂದ ತೆಲಂಗಾಣಕ್ಕೆ 1.29 ಟಿ.ಎಂ.ಸಿ ನೀರನ್ನು ಕುಡಿಯುವ ನೀರಿನ ಅವಶ್ಯಕತೆಗಾಗಿ ಬಿಡುಗಡೆಗೊಳಿಸಲಾಗಿದೆ. |
| ಆ) | ಬಂದಿದ್ದಲ್ಲಿ, ರಾಜ್ಯದ ರೈತರ ಹಿತವನ್ನು ಸಂಪೂರ್ಣವಾಗಿ ಕಡೆಗಣಿಸಿ ಬಿರುಬೇಸಿಗೆಯನ್ನು ಲೆಕ್ಕಿಸದೇ ಹಲವಾರು ಟಿ.ಎಂ.ಸಿ ಅಡಿಗಳಷ್ಟು ನೀರನ್ನು ಹರಿಸಿರುವುದಕ್ಕೆ ಇರುವ ಕಾರಣಗಳೇನು: | |
| ಇ) | ತೆಲಂಗಾಣಕ್ಕೆ ನೀರು ಬಿಟ್ಟರೆ ಬೇಸಿಗೆಯಲ್ಲಿ ತೊಂದರೆ ಆಗುವ ಕಾರಣ ನೀರು ಬಿಡಬಾರದು ಎಂದು ಅಧಿಕಾರಿಗಳು ತಮ್ಮ ಸ್ಪಷ್ಟ ಅಭಿಪ್ರಾಯ ತಿಳಿಸಿದ್ದರೂ ಕೂಡ ಸರ್ಕಾರ ಅದನ್ನು ಮೀರಿ ನೀರು ಬಿಡುವ ಮೂಲಕ ರಾಜ್ಯದ ರೈತರ ಹಿತಾಸಕ್ತಿ ಕಾಪಾಡಲು ಸಂಪೂರ್ಣವಾಗಿ ವಿಫಲವಾಗಿದೆ ಎಂದು ರೈತರು ಆರೋಪಿಸಿದ್ದು, ಈ ಕುರಿತು ಸರ್ಕಾರದ ವಿವರಣೆಗಳೇನು: | |
| ಈ) | ಇನ್ನು ಮುಂದೆಯಾದರೂ ಈ ರೀತಿ ಬೇರೆ ರಾಜ್ಯಗಳಿಗೆ ನೀರು ಬಿಡುವ ಮೊದಲು ಸರ್ಕಾರ ಆ ವ್ಯಾಪ್ತಿಯ ರೈತರೊಂದಿಗೆ ಪೂರ್ವಭಾವಿ ಸಭೆ ನಡೆಸಿ ಅವರ ಅಭಿಪ್ರಾಯವನ್ನು ಆಲಿಸಿ ಪರಿಗಣಿಸಲು ಅಗತ್ಯ ಕ್ರಮ ವಹಿಸುವುದೇ? | |

ಜಸಂಇ 36 ಡಬ್ಲ್ಯೂಬಿಎಂ 2025

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿಗಳು